# ಬೆಂಗಳೂರಿನಲ್ಲಿ ಮೊದಲ ಸಸ್ಯಾಹಾರಿ ಆಯುರ್ವೇದೀಯ ಸುಗಂಧಚಿಕಿತ್ಸಾ ಸ್ಪಾ - ವೇದಅರ್ತ್ ಲಾಂಜ್ ಆರಂಭ

# ಜ್ಞಾನ ಮತ್ತು ನಿಸರ್ಗದ ಒಳ್ಳೆಯತನಗಳ ಮಿಶ್ರಣ ಇಲ್ಲಿದೆ

ಬೆಂಗಳೂರು, ನವೆಂಬರ್ 10, 2017 :- ಬೆಂಗಳೂರು ಮೂಲದ ಸ್ಟಾರ್ಟ್‌ಅಪ್ ಸಂಸ್ಥೆಯಾದ ಅಡ್ವಾಂಟಿಸ್ ಎಂಟರ್‌ಪ್ರೈಸಸ್ ಎಲ್‌ಎಲ್‌ಪಿ ಭಾಗವಾದ ವೇದಅರ್ತ್ ತನ್ನ ಉತ್ಪನ್ನಗಳಲ್ಲಿ ಸಸ್ಯಾಹಾರಿ, ಕ್ರೌರ್ಯರಹಿತ, ಪ್ರಾಣಿಜನ್ಯ ಉತ್ಪನ್ನಗಳಿಲ್ಲದಿರುವುದು, ಯಾವುದೇ ಅಪಾಯಕಾರಿ ರಾಸಾಯನಿಕಗಳು ಅಥವ ಪ್ಯಾರಾಬೆನ್‌ಗಳಿಲ್ಲದಿರುವುದು



ಮುಂತಾದ ವಿಷಯಗಳಿಗೆ ಹೆಸರಾಗಿದ್ದು, ಈಗ ತನ್ನ ರೀತಿಯ ಮೊದಲ ಸಸ್ಯಾಹಾರಿ ಸ್ಪಾ (ವೇಗಾನ್ ಸ್ಪಾ) "ವೇದಅರ್ತ್ ಲಾಂಜ್" ಅನ್ನು ನಗರದಲ್ಲಿ ಇಂದು ಆರಂಭಿಸಿದೆ. ಈ ಲಾಂಜ್ ಅನ್ನು ಇನ್ಫೋಸಿಸ್ ಪ್ರತಿಷ್ಠಾನದ ಚೇರ್ಮನ್ ಮತ್ತು ದಾನಿ ಹಾಗೂ ಖ್ಯಾತ ಲೇಖಕಿಯಾದ ಶ್ರೀಮತಿ ಸುಧಾಮೂರ್ತಿ ಅವರು ಉದ್ಘಾಟಿಸಿದರು. ಈ ವೇದಅರ್ತ್ ಲಾಂಜ್ ವಿಶೇಷವಾಗಿ ಆರಿಸಲಾದ ತ್ವಚೆ, ಕೇಶ ಮತ್ತು ಸೌಖ್ಯತೆಯ ಉತ್ಪನ್ನಗಳನ್ನು ಬಳಸಲಿದೆ. ಆಯುರ್ವೇದ ಮತ್ತು ಸುಗಂಧ ಚಿಕಿತ್ಸೆಯ ಒಳ್ಳೆಯತನಗಳೊಂದಿಗೆ ಇಲ್ಲಿ ಬರುವವರು ತಮ್ಮ ಆರೈಕೆಗಾಗಿ ತಾಜಾತನ ನೀಡುವ ಮತ್ತು ಪುನರುಜ್ಜೀವನಗೊಳಿಸುವ ಮಾರ್ಗವನ್ನು ಆವಿಷ್ಕರಿಸಿಕೊಳ್ಳಲಿದ್ದಾರೆ. ಈ ಬ್ರಾಂಡ್ ಸೌಖ್ಯತೆಗೆ ಸಮಗ್ರವಾದ ಮಾರ್ಗವನ್ನು ಹೊಂದಿದ್ದು ಎಲ್ಲ ಉತ್ಪನ್ನಗಳನ್ನು ಮೂಲಿಕೆಗಳ ಗುಣಪಡಿಸುವ ಶಕ್ತಿಯಲ್ಲಿ ಸಂಪೂರ್ಣ ನಂಬಿಕೆಯೊಂದಿಗೆ ತಯಾರಿಸಲಾಗಿದ್ದು ಜೊತೆಗೆ ಮನಸ್ಥಿತಿಯನ್ನು ಉತ್ತಮಗೊಳಿಸುವ ಸುಗಂಧಗಳನ್ನು ಬಳಸಲಾಗುತ್ತದೆ.

ಈ ಆರಂಭದ ಸಂದರ್ಭದಲ್ಲಿ ಇನ್ಫೋಸಿಸ್ ಪ್ರತಿಷ್ಠಾನದ ಚೇರ್ಮನ್ ಮತ್ತು ದಾನಿ ಹಾಗೂ ಖ್ಯಾತ ಲೇಖಕಿಯಾದ ಶ್ರೀಮತಿ ಸುಧಾ ಮೂರ್ತಿ ಅವರು ಮಾತನಾಡಿ, "ಸಸ್ಯಾಹಾರಿ ಸೌಂದರ್ಯ ಮತ್ತು ಸೌಖ್ಯತೆಯಲ್ಲಿ ನಿಜಕ್ಕೂ ವೇದಅರ್ತ್ ಆದ್ಯಪ್ರವರ್ತಕ ಸಾಹಸ ಯೋಜನೆಯಾಗಿದೆ ಎಂದು ನಾನು ನಂಬಿದ್ದೇನೆ. ವೇದಅರ್ತ್ ಸಾದರಪಡಿಸುವ ಉತ್ಪನ್ನಗಳು ಯಾವುದೇ ಹಾನಿಕಾರಕ ಅಪಾಯಕಾರಿ ರಾಸಾಯನಿಕಗಳನ್ನು ಬಳಸುವುದಿಲ್ಲ. ಇವು ನಿಸರ್ಗಕ್ಕೆ ಹತ್ತಿರವಾಗಿದ್ದು ಎಲ್ಲದಕ್ಕಿಂತ ಮುಖ್ಯವಾಗಿ ಯಾವುದೇ ಪ್ರಾಣಿಗಳ ಮೇಲೆ ಪರೀಕ್ಷಿಸಲಾಗಿವುದಿಲ್ಲ. ಆದ್ದರಿಂದ ಇವು ಕ್ರೌರ್ಯಮುಕ್ತವಾಗಿವೆ. ಉತ್ಕೃಷ್ಟತೆಯ ತಮ್ಮದೇ ಆದ ಮಾರ್ಗವನ್ನು ಸೃಷ್ಟಿಸುವ ದಿವ್ಯಾರಂತಹ ಉದ್ಯಮಶೀಲ ಯುವಜನರನ್ನು ನಾನು ಯಾವಾಗಲೂ ಪ್ರೋತ್ಸಾಹಿಸುತ್ತೇನೆ. ತಮ್ಮ ಪರಿಶ್ರಮಗಳಲ್ಲಿ ಅವರಿಗೆ ಒಳ್ಳೆಯದಾಗಲಿ ಎಂದು ಶುಭಾಶಯ ಕೋರುತ್ತೇನೆ ಮತ್ತು ಹೆಚ್ಚಿನ ಜನರು ಈ ರೀತಿಯ ಅಭ್ಯಾಸವನ್ನು ಮಾಡಿಕೊಳ್ಳಲಿ ಎಂದು ಆಶಿಸುತ್ತೇನೆ"ಎಂದರು.

ಮನಸ್ಸು ಮತ್ತು ದೇಹಗಳಿಗೆ ಪೋಷಣೆ ನೀಡುವುದಲ್ಲದೆ ಆರಾಮ ನೀಡುವ ಹಾಗೂ ಒತ್ತಡ ನಿವಾರಿಸುವ ಅನೇಕ ಸೇವೆಗಳನ್ನು ಈ ಲಾಂಜ್ ಸಾದರಪಡಿಸಲಿದೆ. ಇವುಗಳಲ್ಲಿ ಕ್ಲಿಯರ್‌ಸ್ಕಿನ್, ರೇಡಿಯನ್ಸ್ ರಿವೈವ್, ಮಿರಾಕಲ್ ಮೇನ್, ಐ ಎಲಿಕ್ಸಿರ್, ಅರೋಮ್ಯಾಟಿಕ್ ಬಿರಾ ಮತ್ತು ಇತರೆ ಇದೇ ರೀತಿಯ ತಾಜಾತನ ನೀಡುವ ಮತ್ತು ಪುನರುಜ್ಜೀವನಗೊಳಿಸುವ ಚಿಕಿತ್ಸೆಗಳು ಸೇರಿವೆ. ಜನರ ಬೆಳೆಯುತ್ತಿರುವ ಅಗತ್ಯಗಳನ್ನು ಗುರುತಿಸಿರುವ ವೇದಅರ್ತ್ ಅಗತ್ಯ ತೈಲಗಳು, ಸ್ಕಿನ್ ಟೋನರ್‌ಗಳು ಮತ್ತು ಸಾಬೂನುಗಳ ಶ್ರೇಣಿಯನ್ನು ಬಿಡುಗಡೆ ಮಾಡಲಿದೆ. ಈ ಲಾಂಜ್‌ಗಾಗಿ ಆರಿಸಲಾದ ಫಾರ್ಮುಲಾಗಳನ್ನು ಮನೆಗಳಲ್ಲಿ ತಯಾರಿಸಲಾಗಿದ್ದು ತಮ್ಮದೇ ಆದ ಸಂಶೋಧನೆ ಮತ್ತು ಅಭಿವೃದ್ಧಿ ಸೌಲಭ್ಯದಲ್ಲಿ ಪರೀಕ್ಷಿಸಲಾಗಿದೆ.

ವೇದಅರ್ತ್ ನ ಪೋಷಕ ಸಂಸ್ಥೆಯಾದ ಅಡ್ವಾಂಟಿಸ್ ಎಂಟರ್‌ಪ್ರೈಸಸ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ದಿವ್ಯಾ ದಿನೇಶ್ ಅವರು ಮಾತನಾಡಿ, "ತ್ವಚೆ ಆರೈಕೆ ಮತ್ತು ಸೌಖ್ಯತೆಯ ಉತ್ಪನ್ನಗಳಿಗೆ ಸಂಬಂಧಿಸಿದಂತೆ ಭಾರತದ ಮಾರುಕಟ್ಟೆ ಅತ್ಯಂತ ಕ್ಷಿಪ್ರಗತಿಯಲ್ಲಿ ಬೆಳೆಯುತ್ತಿರುವ ಮಾರುಕಟ್ಟೆಗಳಲ್ಲಿ ಒಂದಾಗಿದೆ. ಆದರೆ ನಾವು ಈ ಕೈಗಾರಿಕೆಯಲ್ಲಿ ಸಸ್ಯಾಹಾರಿ ಉತ್ಪನ್ನಗಳಿಗೆ ಸಂಬಂಧಿಸಿದಂತೆ ಇದ್ದ ಕೊರತೆಯ ಅಂತರವನ್ನು ನಾವು ಗುರುತಿಸಿದೆವು. ಇದರೊಂದಿಗೆ ಸುಗಂಧ ಚಿಕಿತ್ಸೆಯ ಗುಣಪಡಿಸುವ ಗುಣಗಳೊಂದಿಗೆ ನಂಬಿಕಾರ್ಹ ಆಯುರ್ವೇದ ಸಂಪ್ರದಾ ಯಗಳನ್ನು ಸೇರಿಸಿ ಉತ್ಪನ್ನಗಳನ್ನು ಸಮಾನಮನಸ್ಕ ಜನರಿಗೆ ಪೂರೈಸುವ ಅವಕಾಶವನ್ನು ನಾವು ಬಳಸಿಕೊಂಡಿದ್ದೇವೆ. ಅರ್ಹ ಆಯುರ್ವೇದ ಮತ್ತು ಸೌಂದ ರ್ಯಚಿಕಿತ್ಸೆ ತಜ್ಞರ ಮಾರ್ಗದರ್ಶನದ ಅಡಿಯಲ್ಲಿ ನೈಸರ್ಗಿಕ ವಸ್ತುಗಳ ಲಾಭಗಳನ್ನು ಉತ್ಪನ್ನಗಳಿಗೆ ವರ್ಗಾಯಿಸುವುದರೊಂದಿಗೆ ವೇದಅರ್ತ್ ನ ಗಮನಾರ್ಹ ಪ್ರಯಾಣ ಆರಂಭವಾಗಿದೆ. ನಮ್ಮೆಲ್ಲರಲ್ಲಿ ನೂತನ ಮತ್ತು ನೈಸರ್ಗಿಕ ಸೌಖ್ಯತೆಯ ಭಾವನೆ ನೀಡುವ ಅನುಭವ ಪೂರೈಸುವುದಕ್ಕಾಗಿ ನಮ್ಮ ತತ್ವ ಮತ್ತು ಸಿದ್ಧಾಂತಗಳನ್ನು ಜೀವಂತವಾಗಿಸುವ ಒಂದು ಮಾರ್ಗ ಈ ವೇದಅರ್ತ್ ಲಾಂಜ್ ಆಗಿದೆ" ಎಂದರು.

"ನಮ್ಮ ಉತ್ಪನ್ನಗಳಲ್ಲಿ ಶೇ. 90ರಷ್ಟನ್ನು ಸಂಸ್ಥೆಯಲ್ಲಿಯೇ ತಯಾರಿಸಲಾಗುತ್ತದೆ. ಸಸ್ಯಾಹಾರಿ ಮತ್ತು ಕ್ರೌರ್ಯಮುಕ್ತ ಮಾರ್ಗದರ್ಶಿ ಸೂತ್ರಗಳಿಗೆ ಅಂಟಿಕೊಂಡಿರುವ ಪೂರೈಕೆದಾರರಿಂದ ಉಳಿದ ಶೇ. 10ರಷ್ಟು ಉತ್ಪನ್ನಗಳನ್ನು ಪಡೆದುಕೊಳ್ಳುತ್ತೇವೆ. ಸಂಸ್ಥೆಯಲ್ಲಿಯೇ ನಮ್ಮ ಚಿಕಿತ್ಸಕರಿಗೆ ವಿಶೇಷ ತರಬೇತಿ ನೀಡಲಾಗುತ್ತಿದೆ. ಅವರು ವಿವಿಧ ಪಾಳಿಗಳಲ್ಲಿ ಸೇವೆಗೆ ಲಭ್ಯವಿರುತ್ತಾರೆ. ಹೆಚ್ಚುವರಿಯಾಗಿ ನಾವು 60ಕ್ಕೂ ಸೇವೆಗಳನ್ನು ನಮ್ಮ ಸೌಲಭ್ಯದಲ್ಲಿ ಸಾದರಪಡಿಸುತ್ತೇವೆ" ಎಂದರು.

ಫೇಸ್ ಪ್ಯಾಕ್‌ಗಳು, ಫೇಷಿಯಲ್ ತೈಲಗಳು, ಕಲೆಗಳನ್ನು ತಡೆಯುವ ಆ್ಯಂಟಿ ಪಿಗ್ಮೆಂಟೇಷನ್, ವಯಸ್ಸಾಗುವ ಲಕ್ಷಣಗಳನ್ನು ತಡೆಯುವ ಆ್ಯಂಟಿಏಜಿಂಗ್, ಕಣ್ಣಿನ ತಳಭಾಗಕ್ಕಾಗಿ ಅಂಡರ್ ಐ, ಶುದ್ಧಪಡಿಸುವ ಕ್ಲೆನ್ಸಿಂಗ್ ತೈಲಗಳು ಮುಂತಾದ ತ್ವಚೆಯನ್ನು ಶುದ್ಧಗೊಳಿಸುವ ಹಾಗೂ ಹೊಳಪು ನೀಡುವಂತಹ ಉತ್ಪನ್ನಗಳನ್ನು ವೇದಅರ್ತ್ ಸಾದರಪಡಿಸುತ್ತಿದೆ. ಸೌಖ್ಯತೆಯ ಉತ್ಪನ್ನಗಳಲ್ಲಿ ಆರಾಮ ನೀಡುವುದಕ್ಕಾಗಿ, ಮನಸ್ಸು ಹಗುರಾಗುವುದಕ್ಕಾಗಿ ಸ್ನಾನದ ಲವಣಗಳು (ಬಾತ್ ಸಾಲ್ಟ್) ಅಲ್ಲದೆ ನೋವು ನಿವಾರಕ ತೈಲಗಳು ಸೇರಿವೆ. ಕೂದಲು ಉದುರುವುದನ್ನು ತಡೆದು ಪೋಷಕಾಂಶಗಳೊಂದಿಗೆ ಚಿಕಿತ್ಸೆ ನೀಡುವಂತಹ ಕೇಶತೈಲವನ್ನು ಕೂಡ ಸಂಸ್ಥೆ ಪೂರೈಸುತ್ತಿದೆ. ಸ್ಥಾಪನೆಯಾದಾಗಿನಿಂದ ಸಂಸ್ಥೆಯ ಎಲ್ಲಾ ಉತ್ಪನ್ನಗಳು ಮಹಿಳೆಯರಲ್ಲಿ ಅಪಾರ ಜನಪ್ರಿಯತೆ ಪಡೆದಿವೆ. ವೇದಅರ್ತ್ ಗ್ರಾಹಕರ ಆಧುನಿಕ ಜೀವನಶೈಲಿಗೆ ಹೊಂದಿಕೊಳ್ಳುವಂತಹ ಹೆಚ್ಚು ಉತ್ತಮ ಉತ್ಪನ್ನಗಳನ್ನು ನಿಗದಿತವಾಗಿ ಸಾಂಪ್ರದಾಯಿಕ ಜ್ಞಾನದಲ್ಲಿ ನವೀನತೆಯೊಂದಿಗೆ ನೀಡಲು ಸತತವಾಗಿ ಶ್ರಮಿಸುತ್ತಿದೆ. ಜೊತೆಗೆ ಅತ್ಯುತ್ತಮ ಸೌಂದರ್ಯ ಆರೈಕೆ ಹಾಗೂ ಸೌಖ್ಯತೆ ಉತ್ಪನ್ನಗಳನ್ನು ಗುಣಮಟ್ಟ, ಪರಿಣಾಮಕಾರಿ ಮತ್ತು ಸುರಕ್ಷಿತ ರೀತಿಯಲ್ಲಿ ಸಾದರಪಡಿಸುತ್ತಿದೆ. ಈ ಉತ್ಪನ್ನಗಳು ಪೇಟಾ(ಪಿಇಟಿಎ)ದಿಂದ ಪ್ರಮಾಣಪತ್ರಗಳನ್ನು ಪಡೆದಿದ್ದು ಆಯುಷ್ ಒಪ್ಪಿಗೆ ನೀಡಿರುವ ಫಾರ್ಮುಲಾಗಳನ್ನು ಹೊಂದಿರುವುದಲ್ಲದೆ ಜಿಎಂಪಿ ಪ್ರಾಮಾಣಿತವಾಗಿವೆ.

**ವೇದಅರ್ತ್ ಕುರಿತು :-**

ಚಟುವಟಿಕೆಯ ಆದ್ಯಪ್ರವರ್ತಕ ನೂತನ ಬ್ರಾಂಡ್ ಈ ವೇದಅರ್ತ್ ಆಗಿದ್ದು ಪುರಾತನ ಆಯುರ್ವೇದೀಯ ಸಂಪ್ರದಾಯಗಳನ್ನು ಸುಗಂಧ ಚಿಕಿತ್ಸೆಯ ಗುಣಪಡಿಸುವ ಅಂಶಗಳೊಂದಿಗೆ ಮಿಶ್ರಣ ಮಾಡುವ ಅನನ್ಯವಾದ ಚಿಂತನೆ ಹೊಂದಿದೆ. ಪ್ರಕೃತಿ ಕುರಿತು ಗೌರವದೊಂದಿಗೆ ಶೇ.100ರಷ್ಟು ಸಸ್ಯಾಹಾರಿ, ಕ್ರೌರ್ಯಮುಕ್ತವಾದ ಅಲ್ಲದೆ ಯಾವುದೇ ಪ್ರಾಣಿಜನ್ಯ ಉತ್ಪನ್ನಗಳು ಮತ್ತು ಹಾನಿಕಾರಕ ರಾಸಾಯನಿಕಗಳು ಅಥವ ಪ್ಯಾರಾಬೆನ್‌ಗಳನ್ನು ತನ್ನ ಉತ್ಪನ್ನಗಳಲ್ಲಿ ಹೊಂದಿಲ್ಲದ ನಿಜಕ್ಕೂ ಅನನ್ಯ ತತ್ವವನ್ನು ಹೊಂದಿರುವ ತನ್ನ ರೀತಿಯ ಪ್ರಥಮ ಬ್ರಾಂಡ್ ಆಗಿದೆ. ಪ್ರಕೃತಿ ಮತ್ತು ಆಯುರ್ವೇದಗಳ ಶುದ್ಧ ಚೇತನವನ್ನು ಬಳಸಿಕೊಂಡು ನಿಮ್ಮ ಸ್ವಾಭಾವಿಕ ವ್ಯಕ್ತಿತ್ವಕ್ಕೆ ಹತ್ತಿರವಾಗಿರುವ ಭಾವನೆಯನ್ನು ನಿಮಗೆ ಪೂರೈಸುವ ಉದ್ದೇಶವನ್ನು ಈ ಬ್ರಾಂಡ್ ಹೊಂದಿದೆ. ಎಲ್ಲಾ ಜೀವರಾಶಿಗಳಿಗೆ ಹೆಚ್ಚು ಉತ್ತಮವಾದ ಜಗತ್ತನ್ನು ಪೂರೈಸುವ ಅಲ್ಲದೆ ಪ್ರಾಣಿಗಳ ಕಡೆಗೆ ಅನುಕಂಪ ತೋರುವ ವಿಷಯದಲ್ಲಿ ದೃಢವಾದ ನಂಬಿಕೆಯೊಂದಿಗೆ ತಯಾರಾದ ವೇದಅರ್ತ್ ಉತ್ಪನ್ನಗಳನ್ನು ಹಾನಿಮಾಡದ, ನೈಸರ್ಗಿಕ ಮತ್ತು ಅಪಾಯಕಾರಿ ರಾಸಾಯನಿಕಗಳಿಂದ ಮುಕ್ತವಾದ ವಸ್ತುಗಳಿಂದ ಉತ್ಪಾದಿಸಲಾಗಿದೆ.